ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರ 35 ಸೇವಾ ಸಹಕಾರ ಸಂಘಗಳು ಎರಡು ವರ್ಷಗಳ ಮೊದಲೇ ಪ್ರಾರಂಭಿಸಲ್ಪಟ್ಟು, 15 ಸಹಕಾರಿ ಸಂಘಗಳು ಅರ್ಜಿ ಸಲ್ಲಿಸಿ, ಹೈಕೋರ್ಟಿನಿಂದ ಸ್ಟೇ ಬಂದ ಕಾರಣ ಅವುಗಳು ಇನ್ನೂ ಅಸ್ತಿತ್ವಕ್ಕೆ ಬಾರದೆ ಅಲ್ಲಿಯ ಮೂರ್ತೆದಾರರಿಗೆ ತೊಂದರೆಯಾಗಿದೆ. ಈಗ ಆ ಸ್ಟೇ ವೆಕೇಟ್ ಆಗಿದೆ, ವೆಕೇಟ್ ಆಗಿ ಮೂರು ನಾಲ್ಕು ತಿಂಗಳುಗಳು ಕಳೆದರೂ ಸಹ ಈ 15 ಸಹಕಾರಿ ಸಂಘಗಳನ್ನು ಇಷ್ಟರವರೆಗೆ ನೋಂದಣಿ ಮಾಡಿರುವುದಿಲ್ಲ. ಈಗಾಗಲೇ ಸೇಂದಿ ಇಳಿಸುವ ಕಾಲ ಬಂದ ಕಾರಣ ಅದನ್ನು ಯಾವಾಗ ಮಾಡುತ್ತೀರಿ? 15 ಸಹಕಾರಿ ಸಂಘಗಳನ್ನು ಯಾವಾಗ ನೋಂದಣಿ ಮಾಡುತ್ತೀರೆಂದು ಸ್ಪಷ್ಟವಾಗಿ ತಿಳಿಸಬೇಕೆಂದು ಮಂತ್ರಿಯವರಿಂದ ಕೇಳಬಯಸುತ್ತೇನೆ. ಏಕೆಂದರೆ ಇದು ಬಹಳ ಅತ್ಯಾವಶ್ಯಕವಾದಂಥ ಕಾಲ. ಮುಂದಿನ ತಿಂಗಳಿಂದ ಸೇಂದಿ ಇಳಿಸುವಂಥ ಕಾಲ ಬಂದಿದೆ. ಆ 15 ಸಹಕಾರಿ ಸಂಘಗಳಿಗೆ ಇದರ ಪ್ರಯೋಜನ ತಪ್ಪಿಹೋಗಿದೆ. ಆದ್ದರಿಂದ ಯಾವಾಗ ಅದನ್ನು ಎಷ್ಟು ಬೇಗ ಮಾಡುತ್ತೀರಿ ಎಂದು ತಮ್ಮ ಹತ್ತಿರ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದಷ್ಟು ಬೇಗನೆ ಮಾಡಿಸಿಕೊಡುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಕೋರ್ಟಿನಿಂದ ಸ್ಟೇ ವೆಕೇಟ್ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ವೆಕೇಟ್ ಆಗಿದೆ. ಅದಕ್ಕಾಗಿ ತಕ್ಷಣ ಆದಷ್ಟು ಬೇಗನೆ ಮಾಡಿಕೊಡುತ್ತೇನೆ. ನೀವು ಎಂಟು ದಿವಸವಾದರೂ ಟೈಮ್ ಕೊಡಿ.

ಶ್ರೀ ಕೆ. ಸೋಮಪ್ಪ ಸುವರ್ಣ:- ಒಂದು ಲೀಟರ್‌ಗೆ ಒಂದು ರೂಪಾಯಿಯ ಫೀ ರೀತ್ಯಾ ಈ ಸೊಸೈಟಿಗಳು ಅಸ್ತಿತ್ವಕ್ಕೆ ಬಂದಿವೆ. ಬಹಳ ತೊಂದರೆಯಾಗಿದೆ. ಆರ್ಥಿಕವಾಗಿ ಅವುಗಳು ಬಹಳ ಕಷ್ಟವನ್ನು ಅನುಭವಿಸುತ್ತಿವೆ; ನಷ್ಟವನ್ನು ಅನುಭವಿಸುತ್ತಿವೆ. ಲೀಟರ್ ಫೀಯನ್ನು ಕಟ್ಟಲಾಗದೆ ಅವುಗಳಿಗೆ ಹೊಸ ಲೈಸೆನ್ಸನ್ನು ಕೊಡದಿರುವಂಥ ಪ್ರಮೇಯ ಬಂದಿದೆ. ಈಗಾಗಲೇ ಮೂರ್ತೆದಾರರುಗಳ ಸಹಕಾರ ಸಂಘದವರು ಆ ಜಿಲ್ಲೆಯ ಶಾಸಕರು, ಊರಿನ ಜನರು ಈ ಲೀಟರ್ ಫೀಯನ್ನು ಕೂಡಲೇ ರದ್ದುಪಡಿಸಿ ಈ ಸಂಸ್ಥೆಗಳಿಗೆ ಜೀವದಾನವನ್ನು ಕೊಡಬೇಕು ಎಂದು ಹೇಳಿ ಕೇಳಿದ್ದಾರೆ. ಆ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಳಿದ ಹಾಗೆ ಈ ಲೀಟರ್ ಫೀಜು ಏನಿದೆ, ಇದರಿಂದ ತೊಂದರೆ ಇದೆ ಎಂದು ಅಲ್ಲಿನ ಸಂಘದವರು ಕೂಡ ಅರ್ಜಿ ಸಲ್ಲಿಸಿದ್ದಾರೆ ಮತ್ತು ನಮಗೆ ರೆಪ್ರೆಸೆಂಟೇಷನ್ ಕೂಡ ಬಂದಿದೆ. ಅದಕ್ಕೆ ನಾನು ಎಕ್ಸೈಸ್ ಡಿಪಾರ್ಟ್‌ಮೆಂಟಿನವರಿಗೆ ಹೇಳಿದ್ದೇನೆ, ಈ ಲೀಟರ್ ಫೀಜನ್ನು ಹಾಕುವುದಕ್ಕಿಂತಲೂ ಅವರೇನು ಸಲಹೆ ಮಾಡಿದ್ದಾರೆಂದರೆ, ಪ್ರತಿಯೊಬ್ಬ ಮೂರ್ತೆದಾರರು ನೂರು ರೂಪಾಯಿಯ ಹಾಗೆ ಅಥವಾ ರಿಜಿಸ್ಟರ್ ಸೊಸೈಟಿಗಳಿಂದ ಸಾವಿರದಿಂದ ಮೂರು ಸಾವಿರ ರೂಪಾಯಿ ತೆಗೆದುಕೊಂಡು ಮಾಡಿದರೆ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯ ಮೇರೆಗೆ ನಾನು ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ಬರೆದಿದ್ದೇನೆ. ಎಕ್ಸೈಸ್ ಡಿಪಾರ್ಟ್‌ಮೆಂಟಿನವರು ಒಪ್ಪಿಕೊಂಡರೆ ನಮ್ಮದೇನೂ ಆಭ್ಯಂತರವಿಲ್ಲ.

ವಿಷಯ:- ಮುಂಡರಗಿ ಮತ್ತು ಗದಗ ತಾಲ್ಲೂಕಿನಲ್ಲಿನ ಬರ ಪರಿಸ್ಥಿತಿ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 133(575)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ)ಮುಂಡರಗಿ ಮತ್ತು ಗದಗ ತಾಲ್ಲೂಕಿನಲ್ಲಿ ಮುಂಗಾರು ಮಳೆಯು ಕಡಿಮೆಯಾಗಿರುವ ಕಾರಣ ಬಿತ್ತಿರುವ ಬೆಳೆಗಳು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ತೀವ್ರ ಅಭಾವ ಕಾಮಗಾರಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೆ; ಹಾಗಿದ್ದಲ್ಲಿ ಯಾವಾಗ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು?

ಆ)ಮುಂಡರಗಿ ಮತ್ತು ಗದಗ ತಾಲ್ಲೂಕನ್ನು ಬರಗಾಲ ಪ್ರದೇಶವೆಂದು ಸಾರಲಾಗುವುದೇ? ಹಾಗೂ ಈ ಬಗ್ಗೆ ಸರ್ಕಾರದವರು ಹಣ ಬಿಡುಗಡೆ ಮಾಡುವರೇ?

ಶ್ರೀ ಎಂ. ರಾಜಶೇಖರಮೂರ್ತಿ(ಕಂದಾಯ ಸಚಿವರು)

ಮುಂಡರಗಿ ಮತ್ತು ಗದಗ ತಾಲ್ಲೂಕಿನಲ್ಲಿ ಮಳೆಯ ಅಭಾವದಿಂದ ಬಿತ್ತಿರುವ ಬೆಳೆಗಳು ಒಣಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಭಾವ ಪರಿಹಾರ ಕಾರ್ಯಕ್ರಮಗಳಡಿಯಲ್ಲಿ, ಈಗಾಗಲೇ ಮುಂಡರಗಿ ಮತ್ತು ಗದಗ ತಾಲ್ಲೂಕು ಗಳಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಕ್ರಮವಾಗಿ 1.05 ಮತ್ತು 2.40 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಪರಿಸ್ಥಿತಿಗನುಗುಣವಾಗಿ ಈ ತಾಲ್ಲೂಕುಗಳಲ್ಲಿ ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಅಲ್ಲದೇ ವಿವಿಧ ಇಲಾಖೆಗಳಲ್ಲಿ ಉದ್ಯೋಗ ದೊರಕುವ ಕಾಮಗಾರಿಗಳನ್ನು ತ್ವರಿತದಲ್ಲಿ ಪ್ರಾರಂಭಿಸಲು ಸೂಚಿಸಲಾಗಿದೆ.

ಮುಂಡರಗಿ ಮತ್ತು ಗದಗ ತಾಲ್ಲೂಕುಗಳೆರಡರಲ್ಲೂ ಸದ್ಯಕ್ಕೆ ಮೇವಿನ ಸಮಸ್ಯೆ ತೀವ್ರವಾಗಿರುವುದಿಲ್ಲ. ಉದ್ಯೋಗ ಸೃಜನೆ ಕಾಮಗಾರಿಗಳನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು. ಈ ಎರಡೂ ತಾಲ್ಲೂಕುಗಳನ್ನು ಬರಗಾಲ ಪ್ರದೇಶವೆಂದು ಘೋಷಿಸುವ ಬಗ್ಗೆ ಮುಂದಿನ ಕೆಲವು ತಿಂಗಳುಗಳಲ್ಲಿ ಈ ಭಾಗದ ಬೆಳೆ ಆಣೆವಾರಿಯನ್ನು ಪರೀಕ್ಷಿಸಿ ಕ್ರಮ ಕೈಗೊಳ್ಳಲಾಗುವುದು. ಈ ತಾಲ್ಲೂಕುಗಳಲ್ಲಿನ ಅಭಾವದ ಪ್ರಮಾಣ ಮತ್ತು ಜಿಲ್ಲಾಧಿಕಾರಿಗಳಿಂದ ಬರುವ ಬೇಡಿಕೆಯನುಸಾರ ಹಣ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಕೆ.ಹೆಚ್.ಕುರುಡಗಿ:-ತಾವು ಉತ್ತರದಲ್ಲಿ ಮುಂಡರಗಿ ಮತ್ತು ಗದಗ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಹಣ ಬಿಡುಗಡೆಯಾಗದೆ ಇವತ್ತಿನವರೆಗೂ ಒಂದು ಕೆಲಸ ಕೂಡ ನಡೆದಿಲ್ಲ. ಆಮೇಲೆ ರೋಜ್‌ಗಾರ್ ಯೋಜನೆಯಲ್ಲಿ ಮಾತ್ರ ಒಂದು ಲಕ್ಷ ರೂಪಾಯಿ ಕೆಲಸ ನಡೆದಿದೆ. ಉಳಿದ ಯಾವ ಕೆಲಸವೂ ನಡೆದಿಲ್ಲ. ಕುಡಿಯುವ ನೀರಿನ ಸಲುವಾಗಿ ಒಂದು ಕೆರೆ ಸ್ಕಾರ್ಪ್ ಮಾಡಿದರು, ಅದಕ್ಕೂ ಸಹ ಇವತ್ತಿನವರೆಗೂ ರೊಕ್ಕ ಬಿಡುಗಡೆಯಾಗಿಲ್ಲ. ಆದಕಾರಣ ತಾವು ದಯಮಾಡಿ ಬಿಡುಗಡೆ ಮಾಡುತ್ತೀರಾ? ಹಾಗೂ ಎಂದು ಕೆಲಸ ಮಾಡುತ್ತೀರಿ? ಎಷ್ಟು ಬಿಡುಗಡೆ ಮಾಡುತ್ತೀರಿ?

ಶ್ರೀ ಎಂ. ರಾಜಶೇಖರಮೂರ್ತಿ:- ಸದ್ಯದಲ್ಲಿ ಹಣವನ್ನು ಹೊಸದಾಗಿ ಬಿಡುಗಡೆ ಮಾಡುತ್ತೇನೆ. ಮೂರು-ನಾಲ್ಕು ದಿವಸದಲ್ಲಿ ಬಿಡುಗಡೆಯಾಗುತ್ತದೆ. ಕೆಲಸಕಾರ್ಯಗಳನ್ನು ಕೂಡ ತೆಗೆದುಕೊಳ್ಳುತ್ತೇವೆ.